ಶ್ರೀ ಕೆ. ಲಕ್ಕಣ್ಣ.—ಹಾಲಿ ಖಾಲಿ ಇರುವ ಅರಣ್ಯ ಪ್ರದೇಶದ ವಿಸ್ತೀರ್ಣ ೧೧ ಲಕ್ಷ ಚಿಲ್ಲ ಹೆಕ್ಟೇರ್ ಎಂದಿದ್ದಾರೆ. ಕಳೆದ ೫ ವರ್ಷಗಳಲ್ಲಿ ಅರಣ್ಯ ಬೆಳೆಸಲು ಆದ ಖರ್ಚು ಎಷ್ಟು ಎಂದು ಕೇಳಿದ್ದಕ್ಕೆ ೧೮,೧೫೯ ಲಕ್ಷ ಎಂದು ಹೇಳಿದ್ದಾರೆ. ಇದೇನು ಲಕ್ಷವೋ ಕೋಟಿಯೋ ಎಂಬುದನ್ನು ಹೇಳಬೇಕು. ಪ್ರಕೃತಿದತ್ತವಾಗಿ ಅರಣ್ಯದಲ್ಲಿ ಬೆಳೆದಿದ್ದ ಮರಗಿಡಗಳನ್ನು ಅರಣ್ಯ ಇಲಾಖೆಯವರು ಕಡಿದುಹಾಕಿದ್ದಾರೆ. ಆನಂತರ ಆ ಪ್ರದೇಶದ ಬೆಳವಣಿಗೆಗೆ ಅರಣ್ಯಾಧಿಕಾರಿಗಳು ಗಮನಕೊಟ್ಟಿಲ್ಲ. ಇದರಿಂದ ಮಳೆ ಬಾರದ ರೀತಿಯಲ್ಲಾಗಿದೆ ಎಂದು ಹಿರಿಯರು ಅಭಿಪ್ರಾಯ ಪಟ್ಟಿದ್ದಾರೆ. ವರ್ಷಕ್ಕೆ ೪೬ ಸಾವಿರ ಹೆಕ್ಟೇರ್ ಅರಣ್ಯೀಕರಣ ಮಾಡುತ್ತಿದ್ದೇವೆಂದು ಹೇಳಿದ್ದಾರೆ, ಹೀಗೆ ಕಳೆದ ೫ ವರ್ಷದಿಂದ ಎಷ್ಟು ಬೆಳೆಸಿದ್ದಾರೆಂದು ಇಲ್ಲಿ ವಿವರ ಕೊಟ್ಟಿಲ್ಲ, ಅದನ್ನು ಕೊಡಬೇಕು.

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಕಾರ್ಯದರ್ಶಿಯವರು).—ಅಧ್ಯಕ್ಷಸ್ಥಾನೀಯರೆ, ಮಾನ್ಯ ಸದಸ್ಯರು ವ್ಯಕ್ತ ಪಡಿಸಿದ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತೇನೆ. ಖಾಲಿ ಇರುವ ೧೧,೬೧, ೦೦೮ ಹೆಕ್ಟೇರಿನಲ್ಲಿ ಅರಣ್ಯ ಬೆಳೆಸುವ ಬಗ್ಗೆ ತೀವ್ರವಾಗಿ ಕಾರ್ಯಕ್ರಮ ಕೈಗೊಳ್ಳುತ್ತೇವೆ. ಮತ್ತೆ ಎಲ್ಲಿಯಾದರೂ ಅರಣ್ಯಾಧಿಕಾರಿಗಳೇ ಅರಣ್ಯ ರಕ್ಷಣೆ ಮಾಡದಿರುವುದು ಕಂಡು ಬಂದರೆ ಅದನ್ನು ನನ್ನ ಗಮನಕ್ಕೆ ತಂದಲ್ಲಿ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಲಕ್ಕಣ್ಣ.—ಇದುವರೆಗೂ ಎಷ್ಟು ಖರ್ಚಾಗಿದೆ ಮತ್ತು ಇಲ್ಲಿ ಕೊಟ್ಟಿರುವುದು ೧೮ ಲಕ್ಷವೋ ಅಥವಾ ಕೋಟಿಯೋ ಎಂದು ಗೊತ್ತಾಗಲಿಲ್ಲ ?

ಶ್ರೀ ಬಿ. ಬಸವಲಿಂಗಪ್ಪ.—ಆದು ೧೮೧೯ ಕೋಟಿ ೪೯ ಲಕ್ಷ ಚಿಲ್ಲರೆ.

ಶ್ರೀ ಕೆ. ಲಕ್ಕಣ್ಣ.—ಬೆಂಗಳೂರು ಮಹಾನಗರಪಾಲಿಕೆಯಿಂದ ಗಿಡ ನೆಡಲು ೧೦ ಲಕ್ಷ ಕೊಟ್ಟಿದ್ದರೂ ಗಿಡಗಳನ್ನು ಬೆಳೆಸುವ ಕೆಲಸ ವ್ಯಾಪಕವಾಗಿ ನಡೆದಿಲ್ಲ. ಇದಕ್ಕೆ ವಿವರಣೆ ಕೊಡಿ ?

ಶ್ರೀ ಬಿ. ಬಸವಲಿಂಗಪ್ಪ.—ಮಾಡಿಲ್ಲ ಎನ್ನುವುದು ನನ್ನ ಗಮನದಲ್ಲಿದೆ. ಹೇಗೆ ಮಾಡಬೇಕೆಂದು ಸಲಹೆ ಕೊಟ್ಟರೆ ಹಾಗೆ ಮಾಡುತ್ತೇನೆ.

ಶ್ರೀ ಕೆ. ಲಕ್ಕಣ್ಣ.—ಹಣ ಖರ್ಚು ಮಾಡಿರುವುದಕ್ಕೆ ವಿವರಣೆ ಕೊಟ್ಟಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ನೀವು ಕೇಳಿರುವ ಪ್ರಶ್ನೆ ಇದಲ್ಲ. ಈ ಬಗ್ಗೆ ಬೇರೆ ಪ್ರಶ್ನೆ ಕೇಳಿ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಅರಣ್ಯ ರಕ್ಷಕರೆಲ್ಲ ಅರಣ್ಯ ಭಕ್ಷಕರಾಗಿದ್ದಾರೆ. ಆದ್ದರಿಂದ ಅರಣ್ಯ ಇಲಾಖೆಯನ್ನು ಸರಿಪಡಿಸಿ ಇಲ್ಲವಾದ್ದು ಮಾಡಿಬಿಡಿ.

ಶ್ರೀ ಬಿ. ಬಸವಲಿಂಗಪ್ಪ.—ಅರಣ್ಯ ಇಲಾಖೆಯನ್ನು ಸ್ವಶಕ್ತಿಯಿಂದ ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಆ ಸಂಕಲ್ಪ ಮಾಡಿದ್ದೇವೆ. ಆ ಬಗ್ಗೆ ಸಂಶಯ ಪಡಬೇಕಾಗಿಲ್ಲ. ಈಗ ಇದು ವರೆಗೂ ಏನೇನಾಗಿದೆ ಎಂದು ಅಭ್ಯಾಸ ಮಾಡಬೇಕು ನನಗೆ ಈ ಬಗ್ಗೆ ಎಲ್ಲ ಗೊತ್ತಿದೆ ಎಂದು ಹೇಳಲು ನಾನು ತಯಾರಿಲ್ಲ. ಅಭ್ಯಾಸ ಮಾಡಿದ ಮೇಲೆ ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲು ಯೋಚನೆ ಮಾಡುತ್ತೇನೆ.

ಸಾರ್ಕ್ ಸಮ್ಮೇಳನದ ಸಮಯದಲ್ಲಿ ಖರೀದಿಸಿರುವ ಉಪಕರಣಗಳು

೬೯೭ ಶ್ರೀ ಷಫಿ ಅಹಮದ್ (ತುಮಕೂರು) ಮತ್ತು ಶ್ರೀ ರಾಮಲಿಂಗಾರೆಡ್ಡಿ (ಜಯನಗರ)—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಾರ್ಕ್ ಸಮ್ಮೇಳನದ ಅವಧಿಯಲ್ಲಿ ಅತ್ಯಾಧುನಿಕ ಉಪಕರಣಗಳನ್ನು ಬೌರಿಂಗ್ ಆಸ್ಪತ್ರೆಗೆ ಸರಬರಾಜು ಮಾಡಿರುವುದು ನಿಜವೇ ?

ಆ) ಆ ಉಪಕರಣಗಳನ್ನು ಈಗ ಉಪಯೋಗಿಸಲಾಗುತ್ತಿದೆಯೇ ?

ಇ) ಇಲ್ಲದೆ ಇದ್ದರೆ, ಈ ಉಪಕರಣಗಳು ಈಗ ಯಾವ ಪರಿಸ್ಥಿತಿಯಲ್ಲಿವೆ ?

ಈ) ಸರ್ಕಾರವು ಈ ಉಪಕರಣಗಳನ್ನು ಸಾರ್ವಜನಿಕರಿಗೆ ಉಪಯೋಗಕ್ಕೆ ಬಿಡುಗಡೆಗಿಸಿ ಕೊಡಲಾಗುವುದೇ ?

ಶ್ರೀಮತಿ ಮಾನೋರಮಾ ಮಾಧ್ವರಾಜ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

(ಅ) ಹೌದು.

(ಆ) ಹೌದು, ಲೋಕೋಪಯೋಗಿ ಇಲಾಖೆಯಿಂದ ಕಾಮಗಾರಿ ಕೆಲಸ ಮುಗಿಯದೆ ಇರುವುದರಿಂದ ಡಯಾಲಿಸಿಸ್ ಉಪಕರಣವನ್ನು ಉಪಯೋಗಿಸುತ್ತಿಲ್ಲ.

(ಇ) ಬುನಾದಿಗೊಳಿಸಿ ಚಾಲು ಮಾಡಿದ ಈ ಕೆಳಕಂಡ ಉಪಕರಣಗಳು ಹಾಳಾಗಿದ್ದು ಹೆಚ್ಚಿನ ತಾಂತ್ರಿಕ ದೋಷಗಳಿರುವುದರಿಂದ ಉಪಯೋಗಿಸಲ್ಪಡುತ್ತಿಲ್ಲ.

೧) ಓ. ಟಿ. ಲೈಟ್

೨) ಅಲ್ಟ್ರಾಸೌಂಡ್ ಇಕ್ಯೂಪ್‌ಮೆಂಟ್

೩) ಬ್ಲೆಡ್ ಕೆಮಿಸ್ಟ್ರಿ ಮತ್ತು ಬ್ಲಡ್ ಗ್ಯಾಸ್ ಅನಲೈಸರ್.

(ಈ) ಹೌದು.

ಶ್ರೀ ಷಫಿ ಅಹಮದ್.—ಳಿ ವರ್ಷದ ಹಿಂದೆ ಸರ್ಕಾರ ಕಾನ್‌ಫರೆನ್ಸ್ ೮೦ ಲಕ್ಷ ರೂ ಕೊಟ್ಟು ಖರೀದಿ ಮಾಡಿದ ವೈದ್ಯಕೀಯ ಎಕ್ವಿಪ್‌ಮೆಂಟ್ಸ್ ಅನ್ನು ಸಿವಿಲ್ ಕಾಮಗಾರಿ ಕೆಲಸ ಮುಗಿದಿಲ್ಲವೆಂದು ಹಾಗೆಯೇ ಇಟ್ಟಿದ್ದಾರೆ. ಸರ್ಕಾರೀ ಆಸ್ಪತ್ರೆಗಳಲ್ಲಿ ಇಂತಹ ಲೋಪದೋಷಗಳಿರುವುದರಿಂದ ಸಾಹುಕಾರರೆಲ್ಲ ಪ್ರೈವೇಟ್ ನರ್ಸಿಂಗ್‌ಹೋಮ್‌ಗೆ ಹೋಗುತ್ತಿದ್ದು ಬಡವರಿಗೆ ಇದರ ಸೌಲಭ್ಯ ಸಿಗುತ್ತಿಲ್ಲ. ಬಡ ಪೇಷೆಂಟ್ ಏನಾದರು ನರ್ಸಿಂಗ್ ಹೋಂಗೆ ಹೋದರೆ ೫೦೦ ರೂಪಾಯಿಗೆ ಚಾರ್ಜ್ ಮಾಡುತ್ತಿದ್ದಾರೆ. ಈಗ ಹಾಳಾಗಿರುವ ಉಪಕರಣಗಳನ್ನು ಯಾವಾಗ ಸರಿಪಡಿಸುತ್ತೀರಿ ? ಈ ಲೋಪದೋಷಗಳನ್ನೆಲ್ಲಾ ತಾವು ಯಾವಾಗ ಸರಿಪಡಿಸುತ್ತೀರಿ.ಎಂದು ಕೇಳುತ್ತೇನೆ?

ಶ್ರೀಮತಿ ಮನೋರಮಾ ಮಾಧ್ವರಾಜ್.—ಮಾನ್ಯ ಉಪಾಧ್ಯಕ್ಷರಿಗೆ ಅವರು ಕೇಳಿದ ಪ್ರಶ್ನೆ ನನಗೆ ಕೇಳಿಸಿಲ್ಲ. ಆದರೂ ಈಗ ಕೆಟ್ಟಿರುವ ಎಕ್ವಿಪ್‌ಮೆಂಟ್ಸ್‌ಗಳು ಯಾವುದೆಂದು ಹೇಳಿದರೆ ಓ. ಟಿ. ಲೈಟ್, ಅಲ್ಟ್ರಾಸೌಂಡ್ ಎಕ್ವಿಪ್‌ಮೆಂಟ್ ಬ್ಲಡ್ ಕೆಮಿಸ್ಟ್ರಿ ಮತ್ತು ಬ್ಲಡ್ ಗ್ಯಾಸ್ ಅನಲೈಸರ್. ಇದಕ್ಕೆ ನಾವು ಸ್ಪೇರ್ ಪಾರ್ಟ್ಸ್‌ನ್ನು ಇಂಪೋರ್ಟ್ ಮಾಡಬೇಕಾಗುತ್ತದೆ. ಯಾರು ಇದನ್ನು ಸಮಗೆ ಸಪ್ಲೈ ಮಾಡಿದ್ದಾರೋ ಅವರಿಗೆ ಈಗಾಗಲೇ ನಾವು ಆರ್ಡರ್ ಮಾಡಿದ್ದೇವೆ. ಇದು ಬಂದ ಕೂಡಲೇ ಕೆಟ್ಟಿರುವುದನ್ನು ಸರಿ ಮಾಡುವುದಕ್ಕೆ ಪ್ರಯತ್ನಪಡು ಮಾಡುತ್ತೇವೆ.

ಶ್ರೀ ಷಫಿ ಅಹಮದ್.—ಮಾನ್ಯ ಉಪಾಧ್ಯಕ್ಷರೇ ಎಂಭತ್ತು ಲಕ್ಷ ರೂಪಾಯಿ ಬೆಲೆ ಬಾಳುವ ಎಕ್ವಿಪ್‌ಮೆಂಟ್ಸನ್ನು ತಂದ ಮೇಲೆ ಅದು ಸರಿಯಾಗಿ ಒಂದು ವಾರವೂ ಸಹ ಆಡಿಲ್ಲ. ಇಂಥ ಎಕ್ವಿಪ್‌ಮೆಂಟ್ಸನ್ನು ಪರ್ಚೇಸ್ ಮಾಡುವಾಗ ಆಫಿಶಿಯಲ್ಸ್ ಯಾರಿದ್ದಾರೋ, ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೀರಾ ? ನಾಲ್ಕು ವರ್ಷಗಳಿಂದ ಈ ಎಕ್ವಿಪ್‌ಮೆಂಟ್ಸ್ ಐಡ್ಲ್ ಆಗಿ ಬಿದ್ದಿದೆ. ಇದರ ಬಗ್ಗೆ ಡಾಕ್ಟರ್‌ಗಳಿಗೆ ಸರಿಯಾಗಿ ಟ್ರೈನಿಂಗ್ ಕೂಡಾ ಕೊಟ್ಟಿಲ್ಲ. ತುಮಕೂರು ಆಸ್ಪತ್ರೆಯನ್ನು ತಾವು ಅಪ್‌ಗ್ರೇಡ್ ಮಾಡಿದ್ದೀರಿ, ಇವತ್ತಿಗೆ ಮೂರು ತಿಂಗಳಾದರೂ ಅಲ್ಲಿ ಸಫಿಸಿಯೆಂಟ್ ಸ್ಟಾಫ್ ಇಲ್ಲ, ಕ್ಲಾಸ್-೪ನವರು ಕೂಡಾ ಸರಿಯಾಗಿಲ್ಲ, ಡಾಕ್ಟರ್‌ಗಳಿಗೆ ಸರಿಯಾಗಿ ಟ್ರೈನಿಂಗ್ ಕೊಟ್ಟರೆ ಮಾತ್ರ ಇಂಥ ಉಪಕರಣಗಳನ್ನು ಆಪರೇಟ್ ಮಾಡುವುದಕ್ಕೆ ಅವರಿಗೆ ಗೊತ್ತಾಗುತ್ತದೆ. ಈ ಉಪಕರಣಗಳು ಹಾಳಾಗಿ ಎಷ್ಟೋ ಜನ ರೋಗಿಗಳಿಗೆ ಬಹಳ ತೊಂದರೆಯಾಗಿದೆ. ಇದರ ಬಗ್ಗೆ ತಾವು ಏನಂ ಹೇಳುತ್ತೀರಿ ?

ಶ್ರೀಮತಿ ಮನೋರಮಾ ಮಾಧ್ವರಾಜ್.—ಮಾನ್ಯ ಉಪಾಧ್ಯಕ್ಷರೇ, ನಾನು ಈಗಾಗಲೇ ಹೇಳಿದ ಹಾಗೆ ಈ ಉಪಕರಣಗಳಿಗೆ ಸಂಬಂಧಪಟ್ಟ ಹಾಗೆ ಮೇಲ್ಮನೆಯ ಸದಸ್ಯರುಗಳನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚನೆ ಮಾಡಿದ್ದಾರೆ. ಎಲ್ಲಾ ಯಂತ್ರೋಪಕರಣಗಳನ್ನು ಸರ್ಕಾರ ಸಮ್ಮೇಳನ ಆದನಂತರ ಪರ್ಚೇಸ್ ಮಾಡಿದಂಥ ಉಪಕರಣಗಳ ಬಗ್ಗೆ ತನಿಖೆಮಾಡಲು ಸಮನ ಸಮಿತಿಯನ್ನು ರಚನೆ ಮಾಡಿದ್ದಾರೆ, ಇದರಲ್ಲಿ ಯಾರಾದರೂ ತಪ್ಪಿತಸ್ಥರಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಉಪಕರಣಗಳು ಯಾರಿಂದಲೂ ಕೆಡುವುದಿಲ್ಲ. ತಾಂತ್ರಿಕ ದೋಷಗಳಿಂದ ಅವುಗಳು ಹಾಳಾಗುತ್ತವೆ ಅವುಗಳನ್ನು ಸರಿಪಡಿಸಬೇಕಾಗುತ್ತದೆ. ಅವುಗಳನ್ನು ಸರಿಪಡಿಸುವುದಕ್ಕೆ ಈಗಾಗಲೇ ಹೇಳಿದ ಹಾಗೆ ಸ್ಪೇರ್ ಪಾರ್ಟ್ಸ್‌ಗಳನ್ನು ತರಿಸುವುದಕ್ಕೆ ಕ್ರಮ ಕೈಗೊಂಡಿದ್ದೇವೆ. ತುಮಕೂರು ಆಸ್ಪತ್ರೆಯ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಮಾಡಿದ್ದಾರೆ. ಅದಕ್ಕೆ ಅವರು ಬೇರೆ ಪ್ರತ್ಯೇಕ ಪ್ರಶ್ನೆಯನ್ನು ಹಾಕಬೇಕಾಗುತ್ತದೆ.

ಶ್ರೀ ರಾಮಲಿಂಗರೆಡ್ಡಿ.—ಈ ಡಯಾಲಿಸಿಸ್ ಉಪಕರಣ ಏನು ಇದೆ, ಇದನ್ನು ನಾಲ್ಕು ವರ್ಷಗಳಿಂದ ಇನ್‌ಸ್ಟಾಲ್ ಮಾಡಿಲ್ಲ. ಸಾವಿರಾರು ರೋಗಿಗಳು ಈ ಉಪಕರಣದಿಂದ ವಂಚಿತರಾಗಿದ್ದಾರೆ. ಬೌರಿಂಗ್ ಆಸ್ಪತ್ರೆಯಲ್ಲೂ ಸಹಾ ಈ ಉಪಕರಣ ಉಪಯೋಗವಾಗುತ್ತಿಲ್ಲ. ಈ ಉಪಕರಣಗಳನ್ನು

ಈಗ ಉಪಯೋಗಿಸಲಾಗುತ್ತಿದೆಯೇ? ಎಂದು ಪ್ರಶ್ನೆ ಕೇಳಿದ್ದಕ್ಕೆ ಲೋಕೋಪಯೋಗಿ ಇಲಾಖೆಯಿಂದ ಕಾಮಗಾರಿ ಕೆಲಸ ಮುಗಿಯದೆ ಇರುವುದರಿಂದ ಡಯಾಲಿಸಿಸ್ ಉಪಕರಣಗಳನ್ನು ಉಪಯೋಗಿಸುತ್ತಿಲ್ಲ ಎಂದು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಬಿಲ್ಡಿಂಗನ್ನು ಯಾವಾಗ ಪೂರ್ಣ ಮಾಡುತ್ತೀರಿ? ಅದನ್ನೂ ಕೂಡಾ ಹೇಳಬೇಕು ಬಿಲ್ಡಿಂಗ್ ಬಗ್ಗೆ ಲೋಕೋಪಯೋಗಿ ಇಲಾಖೆಯ ಮೇಲೆ ಆಪಾದನೆ ಮಾಡಿದ್ದೀರಿ. ಲೋಕೋಪಯೋಗಿ ಇಲಾಖೆಯಿಂದ ಬಿಲ್ಡಿಂಗ್ ಯಾವಾಗ ಆಗುತ್ತದೆ ?

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಉಪಾಧ್ಯಕ್ಷಿಣಿಯವರೇ, ಡಯಾಲಿಸಿಸ್ ಉಪಕರಣವನ್ನು ಇನ್ನೂ ಇನ್‌ಸ್ಟಾಲ್ ಮಾಡಿಲ್ಲ ಅದನ್ನು ಇನ್‌ಸ್ಟಾಲ್ ಮಾಡುವುದಕ್ಕೆ ಎ. ಸಿ ರೂಮ್ ಬೇಕಾಗುತ್ತದೆ. ಪಿ. ಡಬ್ಲೂ. ಡಿ.ಯವರು ಇನ್ನೂ ಇದರ ಕೆಲಸವನ್ನು ಮುಗಿಸಿಲ್ಲ. ಪಿ.ಡಬ್ಲ್ಯೂ.ಡಿ.ಯವರು ಕೆಲಸವನ್ನು ಮುಗಿಸಿದ ಮೇಲೆ ಇನ್‌ಸ್ಟಾಲ್ ಮಾಡುತ್ತೇವೆ. ಡಯಾಲಿಸಿಸ್ ಉಪಕರಣವನ್ನು ಇನ್‌ಸ್ಟಾಲ್ ಮಾಡುವುದಕ್ಕೆ ಎ.ಸಿ. ರೂಮ್ ಆಗಬೇಕು.

ಶ್ರೀ ರಾಮಲಿಂಗರೆಡ್ಡಿ.—ಯಾವಾಗ ಮಾಡುತ್ತೀರಿ ?

ಶ್ರೀಮತಿ ಮನೋರಮಾ ಮಧ್ವರಾಜ್.—ಆದಷ್ಟು ಬೇಗ ಮಾಡುತ್ತೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ತಮ್ಮ ಅಧಿಕಾರಾವಧಿ ಇರುವಷ್ಟರಲ್ಲೇ ಮಾಡುತ್ತೀರಾ ?

(ಗೊಂದಲ)

ಶ್ರೀ ಎಂ. ಮಹದೇವ್.—ನಾವು ಐದು ವರ್ಷದೊಳಗೆ ಕಂಪ್ಲೀಟ್ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ನಿನ್ನೆ ನಡೆದ ಪ್ರಕರಣ ನೋಡಿದರೆ ನೀವು ಆರು ತಿಂಗಳೂ ಇರುವುದಿಲ್ಲ. ಐದು ವರ್ಷ ಇರುತ್ತೇವೆ ಎಂದು ಹೇಳುತ್ತೀರಲ್ಲಾ ?

(ಗೊಂದಲ)

ಶ್ರೀ ರಾಮಲಿಂಗರೆಡ್ಡಿ.—ಕಿದ್ವಾಯಿ ಮೆಮೊರಿಯಲ್ ಇನ್‌ಸ್ಟಿಟ್ಯೂಟ್‌ನಲ್ಲಿಯೂ ಸ್ಕ್ಯಾನಿಂಗ್ ಉಪಕರಣ ಕೆಟ್ಟು ಹೋಗಿದೆ. ಆದರಿಂದಲೂ ಕೂಡಾ ಎಷ್ಟೋ ರೋಗಿಗಳು ವಂಚಿತರಾಗಿದ್ದಾರೆ. ಬಡವರು ಹೊರಗಡೆ ಹೋಗಿ ತೋರಿಸಬೇಕು ಎಂದು ಹೇಳಿದರೆ ಒಂದು ಸಾವಿರ ರೂಪಾಯಿ ಖರ್ಚಾಗುತ್ತದೆ. ಈ ಸ್ಕ್ಯಾನಿಂಗ್ ಉಪಕರಣವನ್ನು ಯಾವಾಗ ರಿಪೇರಿ ಮಾಡುತ್ತೀರಿ ? ಆದಷ್ಟು ಬೇಗ ಮಾಡುತ್ತೇವೆ ಎಂದು ಹೇಳಿದರೆ ಅರ್ಥವೇನು ಬಡವರಿಗೆ ಅನುಕೂಲ ಮಾಡಿಕೊಡಬೇಕೆಂಬ ಮನಸ್ಸು ಸರ್ಕಾರಕ್ಕೆ ಇಲ್ಲವೆ ?

ಉಪಾಧ್ಯಕ್ಷರು. ತಾವು ಏನಾದರೂ ಹೇಳುವುದು ಇದೆಯೇ ?

ಶ್ರೀಮತಿ ಮನೋರಮಾ ಮಧ್ವರಾಜ್.—ಆದಷ್ಟು ಬೇಗ ಮಾಡಿಕೊಡುತ್ತೇವೆ ಎಂದು ಹೇಳಿದ್ದೇನೆ.

ಶ್ರೀ ರಾಮಲಿಂಗರೆಡ್ಡಿ.—ಈ ಉಪಕರಣ ಕೆಟ್ಟು ಹೋಗಿ ನಾಲ್ಕು ವರ್ಷವಾಗಿದೆ. ಎಂಭತ್ತು ಲಕ್ಷ ರೂಪಾಯಿಗಳನ್ನು ಕೊಟ್ಟು ಈ ಉಪಕರಣಗಳನ್ನು ಕೊಂಡುಕೊಂಡಿದ್ದೀರಿ. ಹಾಗಾದರೆ ಎಂಭತ್ತು ಲಕ್ಷ ರೂಪಾಯಿ ನಷ್ಟವಾದ ಹಾಗೆ ಆಗಲಿಲ್ಲವೇ?

ಶ್ರೀಮತಿ ಮನೋರಮಾ ಮಧ್ವರಾಜ್.—ಈ ಉಪಕರಣಗಳೇನೂ ಹಾಳಾಗಿ ಹೋಗಿಲ್ಲ. ರಿಪೇರಿಗೆ ಬೇಕಾದ ಸಲಕರಣೆಗಳು ಇಲ್ಲದೇ ಇರುವುದರಿಂದ ಕೆಟ್ಟಿದೆ.

ಸರಕಾರಿ ಆಸ್ಪತ್ರೆಗಳಲ್ಲಿ ರೋಗಿಗಳ ಬಗ್ಗೆ ಉದಾಸೀನ

೩೨೬. ಶ್ರೀ ಡಿ. ಬಿ. ಚಂದ್ರೇಗೌಡ (ತೀರ್ಥಹಳ್ಳಿ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರಿ ಆಸ್ಪತ್ರೆಗಳಲ್ಲಿ ಜನಸಾಮಾನ್ಯನಿಗೆ ಆಗುತ್ತಿರುವ ತೊಂದರೆಗಳು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ವೈದ್ಯರು ಕಿರಿಯರಿದ್ದು ಹಿರಿಯ ರೋಗಿಗಳ ಬಗ್ಗೆ ತಾತ್ಸಾರ ತೋರುತ್ತಿದ್ದಾರೆಂಬ ಆರೋಪಗಳಿರುವುದು ನಿಜವೇ ?